**<u>Ex No:- 02/2022</u>** ಪಿ.ಡಬ್ಲ್ಯೂ:-1

ದಿನಾಂಕಃ **04-07-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :-ತೀರ್ಪುಋಣಿದಾರರ ಪರ ವಕೀಲರಿಂದ :-</u>

ನನ್ನ ಅರ್ಜಿಯಲ್ಲಿ ನಮೂದಾಗಿರುವ ವಿಚಾರಗಳು ಶುದ್ಧ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೇ ನಂ.9/2. ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ಜಯ್ಯಪ್ಪ ಮತ್ತು ಧನಂಜಯಪ್ಪರವರ ಜಮೀನು, ಪಶ್ಚಿಮಕ್ಕೆ ಪರಮೇಶ್ವರಪ್ಪರವರ ಜಮೀನು, ಉತ್ತರಕ್ಕೆ ಆರ್ ಎಂ ಸಿ ಮಾರ್ಕೇಟ್ ಮತ್ತು ರಾಜಪ್ಪರವರಿಗೆ ಸೇರಿದ ಜಾಗ, ದಕ್ಷಿಣಕ್ಕೆ ಪರಮೇಶ್ವರಪ್ಪರವರ ಜಮೀನು. ನನ್ನ ಜಮೀನಿನ ಪಶ್ಚಿಮ ದಿಕ್ಕಿಗೆ ಎದುರುದಾರರ ಜಮೀನು ಇದೆ ಎಂದರೆ ಸರಿ. ಸರ್ವೇ ನಂ.7/1 ರಿಂದ 7/3 ಆಸ್ತಿಗಳು ಎದುರುದಾರರ ಆಸ್ತಿಗಳು ಎಂದರೆ ಸರಿ. ಎದುರುದಾರರು ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ತೊಂದರೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಆಸ್ತಿಗಳನ್ನು ಹದ್ದುಬಸ್ತು ಮಾಡಿಕೊಳ್ಳಲು ನಾನು ಸಹಕಾರವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಆಸ್ತಿಗಳನ್ನು ಸರ್ವೇ ಮಾಡಲು ಬಂದಾಗ ಸರ್ವೇ ಅಧಿಕಾರಿಗಳಿಗೆ ಅಡ್ಡಿಯನ್ನುಂಟು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರ ಜಮೀನುಗಳನ್ನು ಸರ್ವೇ ಅಧಿಕಾರಿಗಳು ಸರ್ವೇ ಮಾಡುವ ಪೂರ್ವದಲ್ಲಿ ನನಗೆ ನೋಟೀಸ್ ಜಾರಿ ಮಾಡಿದ ನಂತರ ನಾನು ಸರ್ವೇ ಮಾಡುವ ಸಮಯದಲ್ಲಿ ಹಾಜರಾಗಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಜಮೀನುಗಳನ್ನು ಸರ್ವೇ ಅಧಿಕಾರಿಗಳು ಸರ್ವೇ ಮಾಡುವ ಸಮಯದಲ್ಲಿ ನಾನು ಅಡ್ಡಿಪಡಿಸಿದ್ದರಿಂದ ಸರ್ವೇ ಅಧಿಕಾರಿಗಳು ನ್ಯಾಮತಿ ಪೊಲೀಸರ ಸಹಾಯದಿಂದ ಸರ್ವೇಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಪೂರ್ಣ ವಿಸ್ತೀರ್ಣದಲ್ಲಿ ನಾನು

ಸ್ವಾಧೀನಾನುಭವದಲ್ಲಿದ್ದೇನೆ. ಎದುರುದಾರರು ತಮಗೆ ಸೇರಿದ ಆಸ್ತಿಗಳಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಎದುರುದಾರರು ನನ್ನ ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ಯಾವುದೇ ತೊಂದರೆಯನ್ನು ಕೊಡದಿದ್ದರೂ ಸಹ ಅವರಿಗೆ ತೊಂದರೆಯನ್ನು ಉಂಟು ಮಾಡುವ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.